ಖಾತೆ ಮಾಡಿಕೊಡುವಲ್ಲಿ ವಿಳಂಬ

364(618); ಶ್ರೀ ಚೆಲುವರಾಯಸ್ವಾಮಿ ಎನ್ (ನಾಗಮಂಗಲ)

ಅ) ರಾಜ್ಯದಲ್ಲಿರುವ ನಾಡಕಛೇರಿಗಳ ಸಂಖ್ಯೆ ಎಷ್ಟು; ಹೋಬಳಿ ಅಥವಾ ರೆವಿನ್ಯೂ ಸರ್ಕಲ್‌ಗೆ ಒಂದರಂತೆ ನಾಡಕಚೇರಿಗಳನ್ನು ಪ್ರಾರಂಭಿಸಲು, ಕಂಪ್ಯೂಟರೈಸ್ಡ್ ಮಾಡಲು ಮತ್ತು ಅವುಗಳಿಗೆ ಸೂಕ್ತ ಅಧಿಕಾರವನ್ನು ನೀಡಲು ಕ್ರಮ ತೆಗೆದುಕೊಳ್ಳಲಾಗಿದೆಯೇ; ನಾಡಕಛೇರಿಗಳಿಗೆ ಸರಳವಾದ ಪ್ರಕರಣಗಳಲ್ಲಿ ಖಾತೆ ಬದಲಾವಣೆ ಮಾಡುವ ಅಧಿಕಾರ ನೀಡಿ ರೈತಾಪಿ ಜನರಿಗೆ ಅನುಕೂಲ ಮಾಡಿಕೊಡಲಾಗುವುದೇ;

ಆ) ಖಾತೆ ಬದಲಾವಣೆ ಮಾಡುವ ಅಧಿಕಾರ ಯಾವ ಯಾವ ಸಂದರ್ಭದಲ್ಲಿ ಯಾವ ಅಧಿಕಾರಿಗೆ ಇದೆ; (ವಿವರ ಒದಗಿಸುವುದು) ಸರಳವಾದ ಕಾನೂನಿನ ತೊಡಕಿಲ್ಲದ ಸಣ್ಣ ಸಣ್ಣ ಪ್ರಕರಣಗಳಲ್ಲೂ ಖಾತೆ ಬದಲಾವಣೆ ಮಾಡುವಿಕೆಯಲ್ಲಿ ತೀವ್ರ ವಿಳಂಬ ಮಾಡುತ್ತಿದ್ದು, ರೈತಾಪಿ ಜನರಿಗೆ ಬಹಳ ಅನಾನುಕೂಲ, ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಭೂಮಾಲೀಕರು ಮರಣ ಹೊಂದಿದ ಸಂದರ್ಭದಲ್ಲಿ ಅವರ ವಾರಸುದಾರರಿಗೆ (ಮಕ್ಕಳು ಅಥವಾ ಹಕ್ಕುದಾರರು) ಒಟ್ಟು ಕುಟುಂಬದವರು ಪಾಲುದಾರೀಕತ್ತು ಮಾಡಿಕೊಂಡ ಸಂದರ್ಭದಲ್ಲಿ, ಅಧಿಕಾರಿಗಳ ತಪ್ಪಿನಿಂದ ಅಥವಾ ಇತರ ಕಾರಣಗಳಿಂದ ವ್ಯಕ್ತಿಯ ಹೆಸರು ಮತ್ತು ಇನಿಷಯಲ್‌ಗಳಲ್ಲಿ ಸ್ವಲ್ಪ ಬದಲಾವಣೆಗಳಾಗಿದ್ದಲ್ಲಿ, ಈ ಖಾತೆಗಳನ್ನು ಬದಲಾವಣೆ ಮಾಡುವ ಅಧಿಕಾರ ಮತ್ತು ತಿದ್ದುಪಡಿ ಮಾಡುವ ಅಧಿಕಾರ ಯಾರಿಗೆ ಇದೆ; ಇದಕ್ಕೆ ಎಷ್ಟು ದಿವಸಗಳ ಕಾಲಾವಕಾಶ ನಿಗದಿಪಡಿಸಲಾಗಿದೆ?

ಶ್ರೀ ವಿ.ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ರಾಜ್ಯಾದ್ಯಂತ ಒಟ್ಟು 777 ಹೋಬಳಿ ಕೇಂದ್ರಗಳಲ್ಲಿ ನಾಡಕಛೇರಿಗಳನ್ನು ಸ್ಥಾಪಿಸಲಾಗಿರುತ್ತದೆ. ಅಲ್ಲದೆ ಹೆಚ್ಚು ಅರ್ಜಿಗಳು ಸ್ವೀಕೃತವಾಗುವ ಹೋಬಳಿಗಳ ವ್ಯಾಪ್ತಿಯಲ್ಲಿ 116 ಹೆಚ್ಚುವರಿ ಫ್ರಂಟ್ ಆಫೀಸ್‌ಗಳನ್ನು ಮಂಜೂರು ಮಾಡಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 33 ಡಿಎಸ್‌ಪಿ 2012, ದಿನಾಂಕ:05.06.2012ರಲ್ಲಿ ಪ್ರತಿ ಹೋಬಳಿಗೆ ಒಂದರಂತೆ ನಾಡಕಛೇರಿಗಳನ್ನು ಸ್ಥಾಪಿಸಿ, ಸದರಿ ನಾಡಕಛೇರಿಗಳನ್ನು ಗಣಕೀಕೃತಗೊಳಿಸಲು ಪ್ರತಿ ನಾಡಕಛೇರಿ ಮತ್ತು ಕಸಬಾ ನಾಡಕಛೇರಿಗಳಿಗೆ ಅಗತ್ಯವಾದ ಗಣಕಯಂತ್ರಗಳು, ಇತರ ಯಂತ್ರಗಳು ಹಾಗೂ ಅಂತರ್ಜಾಲದ ವ್ಯವಸ್ಥೆಯನ್ನು ಅಳವಡಿಸಲು ಆದೇಶವಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 62 ಬಿಎಂಎಂ 2012, ದಿ: 18.02.2012 ರಲ್ಲಿ ನಾಡಕಛೇರಿಗಳಲ್ಲಿ ವಿತರಿಸುವ ಎಲ್ಲಾ ಪ್ರಮಾಣ ಪತ್ರ, ದೃಢೀಕರಣ ಪತ್ರ ಹಾಗೂ ಇತರ ಅಧಿಕಾರಗಳನ್ನು ನಾಡಕಛೇರಿಯ ಉಪತಹಶೀಲ್ದಾರರಿಗೆ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ.

ನಮ್ಮ ಭೂಮಿ ತಂತ್ರಾಂಶ ಅನುಷ್ಠಾನವಾದ ನಂತರ ನಾಡಕಛೇರಿಗಳಲ್ಲಿಯೇ ಎಲ್ಲಾ ತರಹದ ಪ್ರಕರಣಗಳಲ್ಲಿ ಖಾತೆ ಬದಲಾವಣೆ ಮಾಡುವ ಮೂಲಕ ರೈತರಿಗೆ ಅನುಕೂಲ ಮಾಡಿಕೊಡಲಾಗುವುದು.

ಆ) ಎಲ್ಲಾ ತರಹದ ಖಾತೆ ಬದಲಾವಣೆ ಮಾಡುವ ಅಧಿಕಾರವು ಕಂದಾಯ ನಿರೀಕ್ಷಕರಿಗೆ ಇರುತ್ತದೆ. ರಾಜ್ಯದಲ್ಲಿ ಮ್ಯುಟೇಷನ್ ಪ್ರಕರಣಗಳನ್ನು ವಿಲೇವಾರಿಗೊಳಿಸುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದನ್ನು ತಪ್ಪಿಸಲು ಹಕ್ಕು ಮತ್ತು ಋಣ ಭೂಸ್ವಾಧೀನ,

ಭೂಪರಿವರ್ತನೆ, ಪೋಡಿಗಳಂತಹ ಪ್ರಕರಣಗಳನ್ನು ಕಛೇರಿ ಕಂದಾಯ ನಿರೀಕ್ಷಕರು ಒಂದೇ ದಿನದಲ್ಲಿ ಅನುಮೋದಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಮ್ಯುಟೇಷನ್ ಪ್ರಕರಣಗಳ ವಿಲೇವಾರಿಯನ್ನು ಕಾಲಕಾಲಕ್ಕೆ ಪರಿಶೀಲಿಸಲು ಸಹಾಯಕ ಆಯುಕ್ತರಿಗೆ ಸೂಚನೆಗಳನ್ನು ನೀಡಲಾಗಿದೆ. ಮ್ಯುಟೇಷನ್ ಪ್ರಕರಣಗಳ ವಿಲೇವಾರಿಯನ್ನು ತ್ವರಿತಗೊಳಿಸಲು ಸಂಯೋಜಿತ ಪೋಡಿಗೆ ಒಳಗಾಗದ ಪ್ರಕರಣಗಳನ್ನು 60 ದಿನಗಳೊಳಗೆ ವಿಲೇ ಮಾಡಲು ಕಾಲಾವಧಿಯನ್ನು ನಿಗದಿಪಡಿಸಿ ಸಕಾಲ ಯೋಜನೆಯೊಂದಿಗೆ ಸಂಯೋಜಿಸಲಾಗಿದೆ. ಮ್ಯುಟೇಷನ್ ಪ್ರಕರಣಗಳನ್ನು ವಿಲೇವಾರಿಗೊಳಿಸುವಲ್ಲಿ ಆಗಬಹುದಾದ ಅಡಚಣೆಗಳನ್ನು ತೆರವುಗೊಳಿಸಲು ರಾಜ್ಯದಲ್ಲಿ ಪಹಣಿ ತಿದ್ದುಪಡಿಯನ್ನು ಆಂದೋಲನದ ಮುಖಾಂತರ ಕಂದಾಯ ಅದಾಲತ್ ರೂಪದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ.

ಇ) ಮ್ಯುಟೇಷನ್ ಆದೇಶಗಳಲ್ಲಿ ಯಾವುದೇ ತಪ್ಪುಗಳಾದಲ್ಲಿ ಬಾಧಿತರು ಸಹಾಯಕ ಆಯುಕ್ತರಿಗೆ ಮೇಲ್ಮನವಿ ಸಲ್ಲಿಸಬಹುದಾಗಿರುತ್ತದೆ. ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 136(2) ರಂತೆ ಇಂತಹ ಪ್ರಕರಣಗಳಲ್ಲಿ ಆದೇಶ ಹೊರಡಿಸಲು ಸಹಾಯಕ ಆಯುಕ್ತರು ಅಧಿಕಾರವನ್ನು ಹೊಂದಿರುತ್ತಾರೆ. ಇಂತಹ ಪ್ರಕರಣಗಳ ವಿಲೇವಾರಿಗೆ ಕಾಯ್ದೆಯಲ್ಲಿ ಕಾಲಾವಕಾಶ ನಿಗದಿಪಡಿಸಿರುವುದಿಲ್ಲ.